# ಸೇತುಬಂಧ ಪೂರ್ವ ಪರೀಕ್ಷೆ 2026-27

## ವಿಷಯ: ಕನ್ನಡ ತರಗತಿ: 6ನೇ ಅಂಕಗಳು: 10 ಸಮಯ: 45 ನಿ

ವಿದ್ಯಾರ್ಥಿಯ ಹೆಸರು: ___________________________________ ಹಾಜರಾತಿ ಸಂಖ್ಯೆ: ____________

---

**ಪ್ರಶ್ನೆ 1. ಕೆಳಗಿನ ಪ್ಯಾರಾವನ್ನು ಗಮನವಿಟ್ಟು ಓದಿ, ಕೊಟ್ಟಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:**

*""ಕಾಡುಗಳು ಭೂಮಿಯ ಹಸಿರು ಹೊದಿಕೆಯಿದ್ದಂತೆ. ಅವು ನಮಗೆ ಕೇವಲ ಆಮ್ಲಜನಕವನ್ನು ಮಾತ್ರ ನೀಡುವುದಿಲ್ಲ, ಬದಲಿಗೆ ಮಳೆಯನ್ನು ತರಿಸಲು ಮತ್ತು ಭೂಮಿಯ ಫಲವತ್ತತೆಯನ್ನು ಕಾಪಾಡಲು ಸಹಾಯ ಮಾಡುತ್ತವೆ. ವನ್ಯಜೀವಿಗಳಿಗೆ ಆಶ್ರಯ ತಾಣವಾಗಿರುವ ಕಾಡುಗಳನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ."."*

**ಪ್ರಶ್ನೆ: ಈ ಪ್ಯಾರಾದಲ್ಲಿ ಕಾಡುಗಳನ್ನು ಯಾವುದಕ್ಕೆ ಹೋಲಿಸಲಾಗಿದೆ?**

ಅ) ಭೂಮಿಯ ಒಣಗಿದ ರಸ್ತೆಗೆ ಆ) ಭೂಮಿಯ ಹಸಿರು ಹೊದಿಕೆಗೆ

ಇ) ಕೇವಲ ಪ್ರಾಣಿಗಳ ಆಟದ ಮೈದಾನಕ್ಕೆ ಈ) ಕಾಡಿನ ದೊಡ್ಡ ಬೆಟ್ಟಗಳಿಗೆ

**ಪ್ರಶ್ನೆ 2. ಕೆಳಗಿನ ವಾಕ್ಯಗಳನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ನಿಖರವಾದ ಉತ್ತರ ಬರೆಯಿರಿ.**

*"ರಾಮು ತನ್ನ ತಾಯಿಯ ಜೊತೆ ಶನಿವಾರದ ಸಂತೆ ಹಾಗೂ ಜಾತ್ರೆಗೆ ಹೋಗಿದ್ದನು. ಅಲ್ಲಿ ಅವನು ತನ್ನ ತಂಗಿಗಾಗಿ ಒಂದು ಸುಂದರವಾದ ಬಣ್ಣದ ಬಲೂನ್ ಮತ್ತು ಆಟಿಕೆಯನ್ನು ಕೊಂಡುಕೊಂಡನು."*

ಅ) ರಾಮು ಯಾರ ಜೊತೆ ಜಾತ್ರೆಗೆ ಹೋಗಿದ್ದನು?

ಉತ್ತರ:___________________________________________________________________

ಬ) ರಾಮು ಜಾತ್ರೆಯಲ್ಲಿ ಏನನ್ನು ಕೊಂಡುಕೊಂಡನು?

ಉತ್ತರ:___________________________________________________________________

**ಪ್ರಶ್ನೆ 3. 'ನನ್ನ ನೆಚ್ಚಿನ ಪ್ರಾಣಿ' ಅಥವಾ 'ನನ್ನ ಶಾಲೆ' ಎಂಬ ವಿಷಯದ ಕುರಿತು 3 ರಿಂದ 4 ಸರಳ ವಾಕ್ಯಗಳನ್ನು ಸ್ವಂತವಾಗಿ ಬರೆಯಿರಿ.**

______________________________________________________________________________

______________________________________________________________________________

______________________________________________________________________________

______________________________________________________________________________

**ಪ್ರಶ್ನೆ 4. ನೀನು ಅಂಗಡಿಗೆ ಹೋಗಿ ಒಂದು ಪೆನ್ಸಿಲ್ ಮತ್ತು ರಬ್ಬರ್ ಕೊಳ್ಳಬೇಕಾಗಿದೆ. ಅಂಗಡಿಯವನ ಹತ್ತಿರ ನೀನು ನಡೆಸುವ ದಿನನಿತ್ಯದ ಮೌಖಿಕ ಸಂಭಾಷಣೆಯನ್ನು 3 ಸಾಲುಗಳಲ್ಲಿ ಬರೆ/ಹೇಳು.**

___________________________________________________________________________

________________________________________________________________
________________________________________________________________
________________________________________________________________
________________________________________________________________

**ಪ್ರಶ್ನೆ 5: ಚಿತ್ರವನ್ನು ನೋಡಿ ಪ್ರಶ್ನೆಗಳಿಗೆ ? ನಿಮ್ಮ ಸ್ವಂತ ಮಾತುಗಳಲ್ಲಿ ವಿವರವಾಗಿ ಹೇಳಿ/ಬರೆಯಿರಿ.**



**ಅ) ಈ ಚಿತ್ರದಲ್ಲಿ ಕಾಣಿಸುತ್ತಿರುವ ಪ್ರಮುಖ ಪಾತ್ರ ಯಾವುದು?**

________________________________________

**ಬ) ಈ ಚಿತ್ರದಲ್ಲಿ ನಡೆಯುತ್ತಿರುವ ಘಟನೆ ಏನು ಮತ್ತು ಕಾಗೆಯು ಆ ಕೆಲಸವನ್ನು ಏಕೆ ಮಾಡುತ್ತಿದೆ?**

________________________________________
________________________________________
________________________________________________________________

**ಪ್ರಶ್ನೆ 6. ವಿವರಗಳನ್ನು ಗಮನಿಸಿ, ನಿಮ್ಮ ಮನೆಯಲ್ಲಿ ಅಥವಾ ಶಾಲೆಯಲ್ಲಿ ನೀರನ್ನು ಹೇಗೆ ಉಳಿಸುತ್ತೀರಿ? ನಿಮ್ಮ ದೈನಂದಿನ ಅನುಭವದ ಆಧಾರದಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ 3 ವಾಕ್ಯ ಬರೆಯಿರಿ.**

________________________________________________________________
________________________________________________________________
________________________________________________________________
________________________________________________________________
________________________________________________________________

**ಪ್ರಶ್ನೆ 7.ಕೆಳಗಿನ ಸಾಲುಗಳನ್ನು ಪೂರ್ಣವಿರಾಮ, ಅಲ್ಪವಿರಾಮ ಹಾಗೂ ಭಾವಸೂಚಕಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಧ್ವನಿ, ಏರಿಳಿತ ಮತ್ತು ನಿಲುಗಡೆಯೊಂದಿಗೆ ಓದಿ ತೋರಿಸು.**

*"ಅಬ್ಬಾ! ಎಷ್ಟು ದೊಡ್ಡ ಆಲದ ಮರ! ಆಹಾ, ಅದರ ನೆರಳು ಎಷ್ಟು ತಂಪಾಗಿದೆ ಗೊತ್ತಾ? ನೀವೂ ಒಮ್ಮೆ ಬಂದು ನೋಡಿ."*

**ಪ್ರಶ್ನೆ 8. ಕೆಳಗಿನ ಪ್ರಚಾರ ಕರಪತ್ರದ (Notice) ವಿವರವನ್ನು ಓದಿ, ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿ.**




ಅ) ಈ ಶಿಬಿರವು ಯಾವುದಕ್ಕೆ ಸಂಬಂಧಿಸಿದೆ ?

________________________________________________
________________________________________________

ಆ) ಇದು ಯಾವ ದಿನಾಂಕ/ಸಮಯದಲ್ಲಿ ಆರಂಭವಾಗುತ್ತದೆ?

ಉತ್ತರ: ________________________________________________
________________________________________________________________

**ಪ್ರಶ್ನೆ 9. ನೀಡಲಾದ ಅಪೂರ್ಣ ಕಥೆಯನ್ನು ನಿಮ್ಮ ಆಲೋಚನೆ ಮತ್ತು ಸೃಜನಾತ್ಮಕತೆಯನ್ನು ಬಳಸಿ ಸ್ವಂತ ವಾಕ್ಯಗಳಿಂದ ಪೂರ್ಣಗೊಳಿಸಿ.**

*"ಒಂದು ಹಳ್ಳಿಯಲ್ಲಿ ಒಬ್ಬ ವೃದ್ಧ ರೈತನಿದ್ದನು, ಅವನಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರು. ಆ ನಾಲ್ಕು ಜನ ಮಕ್ಕಳು ಯಾವಾಗಲೂ ತಮ್ಮ ತಮ್ಮಲ್ಲೇ ಜಗಳವಾಡುತ್ತಾ, ಸೋಮಾರಿಗಳಾಗಿದ್ದರು. ಮಕ್ಕಳ ಜಗಳ ಮತ್ತು ಸೋಮಾರಿತನವನ್ನು ಕಂಡು ವೃದ್ಧ ರೈತನು ಯಾವಾಗಲೂ ಚಿಂತಿಸುತ್ತಿದ್ದನು. ಒಂದು ದಿನ ರೈತನು ಮಕ್ಕಳಿಗೆ ಒಗ್ಗಟ್ಟಿನ ಪಾಠ ಕಲಿಸಲು ಒಂದು ಒಳ್ಳೆಯ ಉಪಾಯವನ್ನು ಮಾಡಿದನು. ಅವನು ಮಕ್ಕಳನ್ನು ಹತ್ತಿರ ಕರೆದು, ಕೆಲವು ಒಣ ಕಡ್ಡಿಗಳನ್ನು ಒಟ್ಟಿಗೆ ಸೇರಿಸಿ ಒಂದು ಕಟ್ಟನ್ನು ಕಟ್ಟಲು ಹೇಳಿದನು. ರೈತನು ತನ್ನ ಮೊದಲ ಮಗನಿಗೆ ಆ ಕಡ್ಡಿಯ ಕಟ್ಟನ್ನು ನೀಡಿ, ಅದನ್ನು ಮುರಿಯಲು ಹೇಳಿದನು, ಆದರೆ…………..."*

______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________
_______________________________________________________

**(ನಿಮ್ಮ ಕಲ್ಪನೆ ಬಳಸಿ ಈ ಕಥೆಯನ್ನು ಕನಿಷ್ಠ 3 ವಾಕ್ಯಗಳಲ್ಲಿ ಪೂರ್ಣಗೊಳಿಸಿ.)**

**ಪ್ರಶ್ನೆ 10. ನೀನು ಶಾಲಾ ಗ್ರಂಥಾಲಯದಲ್ಲಿ ಅಥವಾ ಮನೆಯಲ್ಲಿ ಯಾವುದಾದರೂ ಒಬ್ಬ ಮಹಾನ್ ವ್ಯಕ್ತಿಯ (ಉದಾಹರಣೆಗೆ: ಮಹಾತ್ಮಾ ಗಾಂಧೀಜಿ, ಸ್ವಾಮಿ ವಿವೇಕಾನಂದ, ಅಥವಾ ಡಾ. ಬಿ.ಆರ್. ಅಂಬೇಡ್ಕರ್) ಜೀವನ ಚರಿತ್ರೆ ಅಥವಾ ಪುಸ್ತಕವನ್ನು ಓದಿರುತ್ತೀಯಾ. ಆ ಪುಸ್ತಕದಲ್ಲಿ ನೀನು ಓದಿದ ಯಾವ ಪ್ರಮುಖ ಗುಣ ಅಥವಾ ಘಟನೆ ನಿನಗೆ ತುಂಬಾ ಇಷ್ಟವಾಯಿತು? ಮತ್ತು ಆ ಗುಣವು ನಿನ್ನ ವೈಯಕ್ತಿಕ ಜೀವನದಲ್ಲಿ ಅಥವಾ ಶಾಲೆಯಲ್ಲಿ ಎದುರಾದ ಯಾವುದಾದರೂ ಒಂದು ಸಂದರ್ಭದಲ್ಲಿ ನಿನಗೆ ಹೇಗೆ ನೆರವಾಯಿತು ಎಂಬುದನ್ನು ನಿನ್ನದೇ ಮಾತುಗಳಲ್ಲಿ ಬರೆ.**

______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________
______________________________________________________________________

# ಸೇತುಬಂಧ ಪೂರ್ವ ಪರೀಕ್ಷೆ 2026-27 ಉತ್ತರ ಪತ್ರಿಕೆ

**ವಿಷಯ: ಕನ್ನಡ** **ತರಗತಿ: 6ನೇ**

---

ಪ್ರಶ್ನೆ 1 ಆ) ಭೂಮಿಯ ಹಸಿರು ಹೊದಿಕೆಗೆ

ಪ್ರಶ್ನೆ 2 ಅ) ರಾಮು ತನ್ನ **ತಾಯಿಯ** ಜೊತೆ ಜಾತ್ರೆಗೆ ಹೋಗಿದ್ದನು.

ಬ) ರಾಮು ತನ್ನ ತಂಗಿಗಾಗಿ ಒಂದು ಸುಂದರವಾದ ಬಣ್ಣದ **ಬಲೂನ್ ಮತ್ತು ಆಟಿಕೆಯನ್ನು** ಕೊಂಡುಕೊಂಡನು.

ಪ್ರಶ್ನೆ 3. ನನ್ನ ಶಾಲೆ' ಮಾದರಿ ಉತ್ತರ:** ನಮ್ಮ ಶಾಲೆಯ ಹೆಸರು ಜಿ.ಹೆಚ್.ಪಿ.ಎಸ್ ಚೆಂಡಿಯಾ ನಂ. 1. ನನ್ನ ಶಾಲೆಯಲ್ಲಿ ದೊಡ್ಡದಾದ ಆಟದ ಮೈದಾನವಿದೆ. ನಮ್ಮ ಶಿಕ್ಷಕರು ನಮಗೆ ತುಂಬಾ ಚೆನ್ನಾಗಿ ಪಾಠ ಮಾಡುತ್ತಾರೆ. ನನಗೆ ನನ್ನ ಶಾಲೆ ಎಂದರೆ ತುಂಬಾ ಇಷ್ಟ.

ನನ್ನ ನೆಚ್ಚಿನ ಪ್ರಾಣಿ' ಮಾದರಿ ಉತ್ತರ:** ನನಗೆ ಹಸು ಎಂದರೆ ತುಂಬಾ ಇಷ್ಟ. ಹಸು ನಮಗೆ ಸಿಹಿಯಾದ ಹಾಲನ್ನು ನೀಡುತ್ತದೆ. ಹಸು ಹಸಿರು ಹುಲ್ಲನ್ನು ಮೇಯುತ್ತದೆ. ನಾವು ಹಸುವನ್ನು ಗೋಮಾತೆ ಎಂದು ಪೂಜಿಸುತ್ತೇವೆ.

ಪ್ರಶ್ನೆ 4. (ಅಂಗಡಿಯಲ್ಲಿ)ವಿದ್ಯಾರ್ಥಿ:** ಅಣ್ಣಾ, ನಿಮ್ಮ ಅಂಗಡಿಯಲ್ಲಿ ಪೆನ್ಸಿಲ್ ಮತ್ತು ರಬ್ಬರ್ ಇದೆಯಾ?

**ಅಂಗಡಿಯವನು:** ಹೌದು ತಮ್ಮಾ, ಇದೆ. ನಿನಗೆ ಯಾವ ಬಣ್ಣದ ಪೆನ್ಸಿಲ್ ಬೇಕು?

**ವಿದ್ಯಾರ್ಥಿ:** ನನಗೆ ಅಪಸರಾ ಪೆನ್ಸಿಲ್ ಕೊಡಿ. ಎರಡಕ್ಕೂ ಸೇರಿ ಎಷ್ಟು ಹಣವಾಯಿತು?

ಪ್ರಶ್ನೆ 5. ಈ ಚಿತ್ರವು 'ಬುದ್ಧಿವಂತ ಕಾಗೆ'ಯ ಕಥೆಗೆ ಸಂಬಂಧಿಸಿದ್ದಾಗಿದೆ. ಚಿತ್ರದಲ್ಲಿ ಬಾಯಾರಿದ ಕಾಗೆಯೊಂದು ಹೂಜಿಯ ತಳದಲ್ಲಿದ್ದ ನೀರನ್ನು ಮೇಲಕ್ಕೆ ತರಲು ಯುಕ್ತಿಯಿಂದ ಕಲ್ಲುಗಳನ್ನು ಆಯ್ದು ಹಾಕುತ್ತಿದೆ. ಕಲ್ಲುಗಳನ್ನು ಹಾಕಿದಾಗ ನೀರು ಮೇಲಕ್ಕೆ ಬರುತ್ತದೆ ಮತ್ತು ಕಾಗೆ ನೀರು ಕುಡಿದು ಹಾರಿಹೋಗುತ್ತದೆ.

ಪ್ರಶ್ನೆ 6. 1. ನಾನು ಹಲ್ಲುಜ್ಜುವಾಗ ಅಥವಾ ಕೈ ತೊಳೆಯುವಾಗ ನಲ್ಲಿಯನ್ನು (Tap) ಸುಮ್ಮನೆ ಬಿಡದೆ ನೀರನ್ನು ಉಳಿಸುತ್ತೇನೆ.

2. ಮನೆಯಲ್ಲಿ ತರಕಾರಿ ತೊಳೆದ ನೀರನ್ನು ವ್ಯರ್ಥ ಮಾಡದೆ ಗಿಡಗಳಿಗೆ ಹಾಕುತ್ತೇನೆ.

3. ಶಾಲೆಯ ಕುಡಿಯುವ ನೀರಿನ ನಲ್ಲಿಯಲ್ಲಿ ನೀರು ಸೋರುತ್ತಿದ್ದರೆ ತಕ್ಷಣವೇ ಶಿಕ್ಷಕರಿಗೆ ತಿಳಿಸಿ ಅದನ್ನು ಬಂದ್ ಮಾಡಿಸುತ್ತೇನೆ.

ಪ್ರಶ್ನೆ 7. ವಿದ್ಯಾರ್ಥಿಯ ಮೌಖಿಕ

ಪ್ರಶ್ನೆ 8. ಅ) ಈ ಶಿಬಿರವು **ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣೆಗೆ** ಸಂಬಂಧಿಸಿದೆ.

ಆ) ಇದು ಬರುವ **ಭಾನುವಾರ ಬೆಳಿಗ್ಗೆ 9:00 ಗಂಟೆಗೆ** ಆರಂಭವಾಗುತ್ತದೆ.

ಪ್ರಶ್ನೆ 9. ...ಆದರೆ ಅವನಿಗೆ ಆ ಕಡ್ಡಿಯ ಕಟ್ಟನ್ನು ಮುರಿಯಲು ಸಾಧ್ಯವಾಗಲಿಲ್ಲ. ನಂತರ ಉಳಿದ ಮಕ್ಕಳೂ ಪ್ರಯತ್ನಿಸಿದರೂ ಯಾರಿಂದಲೂ ಅದನ್ನು ಮುರಿಯಲು ಆಗಲಿಲ್ಲ. ಆಗ ರೈತನು ಕಡ್ಡಿಯ ಕಟ್ಟನ್ನು ಬಿಚ್ಚಿ ಒಂದೊಂದೇ ಕಡ್ಡಿಯನ್ನು ಕೊಟ್ಟಾಗ ಮಕ್ಕಳು ಸುಲಭವಾಗಿ ಮುರಿದರು. "ನೀವು ಒಟ್ಟಾಗಿದ್ದರೆ ಯಾರೂ ನಿಮ್ಮನ್ನು ಸೋಲಿಸಲು ಸಾಧ್ಯವಿಲ್ಲ" ಎಂದು ರೈತನು ಮಕ್ಕಳಿಗೆ ಒಗ್ಗಟ್ಟಿನ ಪಾಠ ಕಲಿಸಿದನು.

ಪ್ರಶ್ನೆ 10. ನಾನು ಶಾಲಾ ಗ್ರಂಥಾಲಯದಲ್ಲಿ **ಮಹಾತ್ಮಾ ಗಾಂಧೀಜಿಯವರ** ಪುಸ್ತಕ ಓದಿದ್ದೆ. ಅದರಲ್ಲಿ ಅವರು ಯಾವಾಗಲೂ 'ಸತ್ಯವನ್ನೇ ಹೇಳಬೇಕು' ಎಂದು ಪಣ ತೊಟ್ಟಿದ್ದ ಗುಣ ನನಗೆ ತುಂಬಾ ಇಷ್ಟವಾಯಿತು. ಒಮ್ಮೆ ಪರೀಕ್ಷೆಯಲ್ಲಿ ನನಗೆ ಕಡಿಮೆ ಅಂಕ ಬಂದಾಗ ಅಮ್ಮನಿಗೆ ಸುಳ್ಳು ಹೇಳಬೇಕು ಅನ್ನಿಸಿತ್ತು. ಆದರೆ ಗಾಂಧೀಜಿಯವರ ಸತ್ಯದ ನೆನಪಾಗಿ ಅಮ್ಮನಿಗೆ ನಿಜ ಹೇಳಿದೆ. ಅಮ್ಮ ಬೈಯದೆ, ಮುಂದಿನ ಬಾರಿ ಚೆನ್ನಾಗಿ ಓದು ಅಂದರು. ಪುಸ್ತಕದ ಆ ಭಾಗ ನನ್ನ ಜೀವನಕ್ಕೆ ನೆರವಾಯಿತು.